ಮುಗಿಸುವ ಹೊತ್ತಿಗೆ ಏನೋ ಸಂತೋಷ, ಏನೋ ಸಾಧಿಸಿದಂಥ ಸಂತೃಪ್ತಿ. ಹಣೆಯಿಂದ ಬೆವರು ಸುರಿಯುತ್ತಿತ್ತು. ಮೆಲ್ಲನೆ ಕೈಯಿಂದ ಆ ಬೆವರನ್ನು ಒರೆಸಿಕೊಂಡಾಗ ಕಟ್ಟದ ಮೆಟ್ಟಲು ಸಮತಟ್ಟಾಗಿದೆಯೇ ಎಂದು ನೋಡುವುದಕ್ಕಾಗಿ ಮೇಲು ಮೆಟ್ಟಲಿನ ತುದಿಗೆ ಒಂದು ರಿಪೀಸಿನ ತುಂಡಿಟ್ಟು ಅಲ್ಲಿಂದ ಇನ್ನೇನು ತೂಗುಗುಂಡನ್ನು ಇಳಿಬಿಡಬೇಕು, ಅದಾಗ ದೂರದಲ್ಲಿ ಒಂದು ಕಾರಿನ ಹೆಡ್‌ಲೈಟುಗಳ ಬೆಳಕು ಕಾಣಿಸಿಕೊಂಡು, ಕವಿದ ಕತ್ತಲನ್ನು ಓಡಿಸತೊಡಗಿ ಅವನು ಎಲ್ಲವನ್ನೂ ಅಲ್ಲೇ ಬಿಟ್ಟು, ಹತ್ತು ಹೆಜ್ಜೆ ದೂರದಲ್ಲಿದ್ದ ಒಂದು ಮರದ ಹಿಂದೆ ಅಡಗಿಕೊಂಡ. ಕಾರು ಬಂದ



ಹಾಗೆಯೇ ಭರ್ರೆಂದು ಹೊರಟು ಹೋಯಿತು. ಅವನು ಮತ್ತೆ ಆ ಮೆಟ್ಟಲಿನ ಬಳಿ ಕೂತುಕೊಂಡದ್ದೇ ಒಂದರ ಹಿಂದೆ ಇನ್ನೊಂದರಂತೆ ಬರುತ್ತಿದ್ದ ಎರಡು ಕಾರುಗಳ ಕಣ್ಣುಕುಕ್ಕುವ ಬೆಳಕು. ಮತ್ತೆ ಮರದ ಬಳಿಗೆ ಓಡಿದ ಕೂಡಲೇ, ಕಾರುಗಳು ಹೀಗೆ ಎಲ್ಲೆಲ್ಲಿಗೋ ಮುಂಜಾನೆಗೇ ಹೊರಟುಬಿಡುತ್ತವೆಯೇನೊ, ತಾನು ಇಷ್ಟು ಹೊತ್ತಿಗೆ ಬರದೆ ರಾತ್ರಿ ಹನ್ನೆರಡು ಗಂಟೆಗೋ ಒಂದು ಗಂಟೆಗೋ ಬಂದಿದ್ದರೆ ಆರಾಮಾಗಿ ಕೆಲಸ ಮುಗಿಸಿ ಹೋಗಬಹುದಿತ್ತೇನೋ ಎನ್ನಿಸಿತು. ಆ ಎರಡು ಕಾರುಗಳು ದೂರ ಹೋಗಿ ಕಣ್ಮರೆಯಾದದ್ದೇ ಅವನು ಮತ್ತೆ ಆ ಮನೆಯ ಬಳಿಗೆ ಓಡಿಹೋಗಿ, ತಾನು ಕಟ್ಟಿದ್ದ ಮೆಟ್ಟಲಿಗೆ ತೂಗುಗುಂಡನ್ನು ಇಳಿಬಿಟ್ಟ. ಅದು ತೋರಿಸಿದಂತೆ ತುಸುವೇ ಮೇಲೆಕೆಳಗೆ ಆಗಿದ್ದ ಆ ಮೆಟ್ಟಲಿಗೆ ಎಷ್ಟು ಬೇಕೋ ಅಷ್ಟು ಸಿಮೆಂಟು ಹಾಕಿ ಕರಣೆಯಿಂದ ಮಟ್ಟಸ ಮಾಡಿದ. ನಾಳೆ ಮಧ್ಯಾಹ್ನದ ಹೊತ್ತಿಗೆ ಪೂರಾ ಒಣಗಿರುವುದರಲ್ಲಿ ಸಂಶಯವಿಲ್ಲ.

ಇನ್ನು ಉಳಿದದ್ದು ತಾನು ಒಡೆದುಹಾಕಿದ್ದ ಮೆಟ್ಟಲ ಹಾಳುಮೂಳನ್ನು ಗುಡ್ಡೆಮಾಡಿ ಎಲ್ಲಾದರೂ ಎಸೆಯುವುದು. ಎಲ್ಲಿ ಎಸೆಯುವುದು? ಯಾವ ಮನೆಯ ಮುಂದೆಯೂ ಕಸದ ತೊಟ್ಟಿಯಿಲ್ಲ. ಕಡೆಗೆ ಇಟ್ಟಿಗೆಗಳನ್ನು ತಂದಿದ್ದ ಗೋಣಿಚೀಲಕ್ಕೆ ಇನ್ನೇನು ಅದನ್ನು ತುಂಬಿಕೊಳ್ಳಬೇಕು, ಆಗ ಅಬ್ಬರಿಸುತ್ತ ಬಂದ ಒಂದು ಭಾರಿ ಟ್ರಕ್ಕು ಅವನನ್ನು ದಾಟಿ ಹೋದ ರಭಸಕ್ಕೆ ಬೀದಿಬದಿಯ ತರಗೆಲೆಗಳು ಮೇಲೆದ್ದು ಗಾಳಿಯಲ್ಲಿ ಸುತ್ತಿದವು. ಒಂದು ಮರದಲ್ಲಿ ತಾವು ಎಚ್ಚರ ಗೊಂಡೆವೆಂದು ಸಾರುವಂತೆ ನಾಲ್ಕಾರು ಕಾಗೆಗಳು ಕೂಗಿಕೊಂಡವು. ಕೆಲವು ಕ್ಷಣಗಳ ನಂತರ ಒಂದರ ಹಿಂದೊಂದರಂತೆ ನಾಲ್ಕೈದು ಕಾರುಗಳು.

ಶಿವಶಂಕರ ಕೊನೆಗೂ ಹಾಳುಮೂಳನ್ನು ತುಂಬಿ ಕೊಂಡ ಗೋಣಿಚೀಲವನ್ನೂ ತನ್ನ ಸಲಕರಣೆಗಳಿದ್ದ ಇನ್ನೊಂದು ಚೀಲವನ್ನೂ ಸೈಕಲ್ಲಿಗೆ ಕಟ್ಟಿಕೊಂಡು ಅಲ್ಲಿಂದ ಹೊರಡುವ ಹೊತ್ತಿಗೆ ಬೆಳಕು ಹರಿದಿತ್ತು. ಒಂದೆರಡು ಮೈಲಿ ಸೈಕಲ್ ತುಳಿದವನು ಒಂದು ಖಾಲಿ ಸೈಟಿನಲ್ಲಿದ್ದ ಕಸದ ರಾಶಿಯನ್ನು ಕಂಡದ್ದೇ ಸೈಕಲಿನಿಂದ ಇಳಿದು ಗೋಣಿಚೀಲವನ್ನು ಅಲ್ಲಿ ಎಸೆದು ಏನೋ ಸಾಧಿಸಲಾಗದ್ದನ್ನು ಸಾಧಿಸಿದ ಸಂತೋಷದಿಂದ ಷೆಡ್ಡಿಗೆ ಹೋಗಿ ಮಲಗಿದ. ಆದರೆ ನಿದ್ದೆ ಬರಬೇಕಲ್ಲ. ಎದ್ದು ಮುಖ ತೊಳೆದುಕೊಂಡು ಅಷ್ಟೇನೂ ದೂರದಲ್ಲಿರದ ಒಂದು ದರ್ಶಿನಿ ಹೋಟಲಿನಲ್ಲಿ ಇಡ್ಲಿ-ಸಾಂಬಾರ್ ತಿಂದ. ಆಮೇಲೆ ನಡೆದೂ ನಡೆದೂ ಕಡೆಗೆ ಅದೇ ಬೀದಿಯನ್ನು ತಲುಪಿದ. ಆ ಮನೆ ಮೊದಲಿದ್ದಂತೆ ನಿಶ್ಶಬ್ದವಾಗಿತ್ತು. ಹಸಿಹಸಿಯಾಗಿದ್ದ ಆ ಮಧ್ಯದ ಮೆಟ್ಟಲನ್ನು ಇನ್ನೂ ಯಾರೂ ತುಳಿದಂತಿರಲಿಲ್ಲ.

ಅವತ್ತು ಮಧ್ಯಾಹ್ನವೂ ಇನ್ನೊಮ್ಮೆ ಆ ಮನೆಯನ್ನು ನೋಡಿದ್ದಾಯಿತು. ಆಮೇಲೆ ಹೆಚ್ಚುಕಡಿಮೆ ಪ್ರತಿದಿನವೂ ಸಮಯ ಸಿಕ್ಕಾಗಲೆಲ್ಲ...

●